


**ಡಾಕ್ಟರ್:** ಏನಾಯಿತು?
**ಗೋಪಿ:** ನಾಯಿ ಕಚ್ಚಿತು ಡಾಕ್ಟರ್.
**ಡಾಕ್ಟರ್:** ಹೊರಗಡೆ ಬೋರ್ಡ್ ನೋಡಿಲ್ಲವೆ ನೀನು? ಇಲ್ಲಿ ರೋಗಿಯನ್ನು ನೋಡುವ ಸಮಯ ಬೆಳಿಗ್ಗೆ 9ರಿಂದ ಮಧ್ಯಾಹ್ನ 12ವರೆಗೆ ಮಾತ್ರ. ಆದರೆ ನೀನು ಮಧ್ಯಾಹ್ನ 1 ಗಂಟೆಗೆ ಬಂದಿರುವೆ?
**ಗೋಪಿ:** ನಾನೇನೋ ಬೋರ್ಡ್ ನೋಡಿದ್ದೇನೆ ಡಾಕ್ಟರ್, ಆದರೆ ಆ ನಾಯಿಗೆ ಓದಲು ಬರುವುದಿಲ್ಲವಲ್ಲ.

**ಮನಃಶಾಸ್ತ್ರಜ್ಞ:** ನಿನ್ನ ಪ್ರೀತಿ ವ್ಯಕ್ತಪಡಿಸಲು ಆಗುತ್ತಿಲ್ಲವೆನ್ನುವುದೇ ತೊಂದರೆ ತಾನೆ?
**ತರುಣ:** ಅದಲ್ಲ, ಈ ವಿಷಯವನ್ನು ನನ್ನ ಗಂಡನಿಗೆ ಹೇಗೆ ತಿಳಿಸಲಿ ಎನ್ನುವುದೇ ನನ್ನ ತೊಂದರೆ.




**ಸ್ವಾಮೀಜಿ:** ವತ್ಸಾ, ಸಂಸಾರದ ಮೋಹಗಳನ್ನು ಬಿಟ್ಟು ಧ್ಯಾನ ಮಾಡು. 'ಓಂ' ಶಬ್ದದ ಉಚ್ಚಾರಣೆ ಮಾತ್ರದಿಂದಲೇ ನಿನ್ನ ಮೆದುಳಿನ ನರನಾಡಿಗಳು ಜಾಗೃತಗೊಳ್ಳುತ್ತವೆ.
**ಹರೀಶ:** ಓ ಅಷ್ಟೇನಾ? ನನ್ನ ಪತ್ನಿ 'ಓ...' ಎಂದು ಕರೆದಾಕ್ಷಣ ನನ್ನ ಪೂರ್ತಿ ಮೆದುಳೇ ಜಾಗೃತಗೊಳ್ಳುತ್ತದೆ. ಸಂಸಾರದಲ್ಲಿದ್ದರೆ 'ಮ' ಕಾರದ ಅವಶ್ಯಕತೆಯೂ ಇಲ್ಲ ಸ್ವಾಮೀಜಿ.





ಪಪ್ಪು ತನ್ನ ಗರ್ಲ್‌ಫ್ರೆಂಡ್ ಜೊತೆ ಡಿನ್ನರ್‌ಗೆ ಹೋದಾಗ ರೆಸ್ಟೋರೆಂಟ್‌ನಲ್ಲಿ...
**ಪಪ್ಪು:** ಹೇಳು ಬೇಬಿ, ಏನು ಆರ್ಡರ್ ಮಾಡಲಿ?
**ಗರ್ಲ್‌ಫ್ರೆಂಡ್:** ನನಗಾಗಿ ಒಂದು ಪಿಜ್ಜಾ ಆರ್ಡರ್ ಮಾಡು ಮತ್ತು ನಿನಗಾಗಿ ಒಂದು ಆಂಬ್ಯುಲೆನ್ಸ್ ತರಿಸು.
**ಪಪ್ಪು:** ಆಂಬ್ಯುಲೆನ್ಸ್ ಏಕೆ ಬೇಬಿ?
**ಗರ್ಲ್‌ಫ್ರೆಂಡ್:** ಹಿಂದಕ್ಕೆ ತಿರುಗಿ ನೋಡು, ನಿನ್ನ ಹೆಂಡತಿ ನಿಂತಿದ್ದಾಳೆ.

ಪಬ್ಲಿಕ್ ಪಾರ್ಕ್‌ನಲ್ಲಿ ಹುಡುಗ – ಹುಡುಗಿ ಪ್ರೇಮಾಲಾಪದಲ್ಲಿ ತೊಡಗಿದ್ದರು...
**ಹುಡುಗ:** ಡಾರ್ಲಿಂಗ್, ನಿನ್ನ ಕಣ್ಣುಗಳಲ್ಲಿ ನನಗೆ ಇಡೀ ಜಗತ್ತೇ ಕಾಣುತ್ತಿದೆ.
**ಹಿಂದೆ ನಿಂತಿದ್ದ ಮುದುಕ:** ನನ್ನ ಆಕಳು ಕಾಣಿಸುತ್ತಿಲ್ಲ. ನಿನಗೇನಾದರೂ ಕಾಣಿಸುತ್ತಿದ್ದರೆ ತಿಳಿಸು ಮಗಾ.




**ಪತ್ನಿ:** ಮಹಿಳೆಯರಿಗೆ ವಾಸ್ತವದಲ್ಲಿ ವಯಸ್ಸು 45 ಆಗಿದ್ದರೂ, ತವರು ಮನೆಗೆ ಕಾಲಿಟ್ಟಾಕ್ಷಣ 18ನೇ ವಯಸ್ಸಿಗೆ ಮರಳಿದಂತೆ ಭಾಸವಾಗುತ್ತದೆ. ನಿಮಗೂ ಹೀಗೇನಾ ರೀ?
**ಪತಿ:** ನೀವು ತವರು ಮನೆಗೆ ಹೋದ ಬಳಿಕ ನಮಗೂ ಹಾಗೇ ಅನ್ನಿಸುತ್ತದೆ.




**ಪತ್ನಿ:** ಜನ್ಮ ದಿನದಂದು ಒಡವೆ ಕೇಳಿದ್ರೆ, ಒಡವೆ ಡಬ್ಬ ಕೊಟ್ಟಿದ್ದೀರಿ. ನನ್ನ ಸ್ನೇಹಿತೆಯರ ಎದುರು ಎಷ್ಟು ನಾಚಿಕೆ ಆಯ್ತು ಅಂತ ಗೊತ್ತಾ ನಿಮಗೆ?
**ಪತಿ:** ಅದು ನಿನಗೆ ಖುಷಿ ಆಗಿರಬೇಕಲ್ವಾ?
**ಪತ್ನಿ:** ಖುಷಿನಾ ಏನಕ್ಕೆ?
**ಪತಿ:** ನಾಚಿಕೆನೇ ನಾರಿಯರ ಒಡವೆ ಕಣೆ.

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ, ಮುಂಬೈ